## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
## ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ

ನಂ. 09, 2ನೇ ಮಹಡಿ, 1ನೇ ಮುಖ್ಯರಸ್ತೆ, (ಹೊರವರ್ತುಲ ರಸ್ತೆ),ಕೆಂಗೇರಿ ಉಪನಗರ,ಬೆಂಗಳೂರು-60.

ಸಂಖ್ಯೆ : ಸ.ಇಂ/ವಾ-159/ವಾರ್ಡ್‌ಸಭೆ/2022-23　　　　ದಿನಾಂಕ : 06/04/2022

### ವಾರ್ಡ್-159ರ ವಾರ್ಡ್ ಸಭೆಯ ನಡವಳಿ.

ದಿನಾಂಕ: **06/04/2022** ರಂದು ಕೆಂಗೇರಿ ಉಪ ವಿಭಾಗ ವಾರ್ಡ್-159ರ ವಾರ್ಡ್ ಕಛೇರಿಯಲ್ಲಿ ಶ್ರೀ ಬಸವರಾಜು, ವಾರ್ಡ್-159ರ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿ.

ಹಾಜರಿದ್ದವರು:

| ಕ್ರ. ಸಂ | ಸದಸ್ಯರ ಹೆಸರು | ಪದನಾಮ/ಇಲಾಖೆ | ಹಾಜರಾತಿ |
|---|---|---|---|
| 1 | ಶ್ರೀ ಸತ್ಯ ನಾರಾಯಣ | ಮಾಜಿ ಪಾಲಿಕೆ ಸದಸ್ಯರು, ಬಿಬಿಎಂಪಿ | ಹಾಜರಿದ್ದರು |
| 2 | ಶ್ರೀ ನಾಗರಾಜು | ಜಲ ಪರಿವೀಕ್ಷಕರು ಬಿ.ಡಬ್ಲ್ಯೂ.ಎಸ್. ಎಸ್.ಬಿ. | ಹಾಜರಿದ್ದರು |
| 3 | ಶ್ರೀ ನವೀನ್ ಕುಮಾರ್ | ಕಿರಿಯ ಆರೋಗ್ಯ ಪರಿವೀಕ್ಷಕರು ಕೆಂಗೇರಿ | ಹಾಜರಿದ್ದರು |
| 4 | ಶ್ರೀ ರಾಮು ಬಿ.ಸಿ | ಹಿರಿಯ ಆರೋಗ್ಯ ಪರಿವೀಕ್ಷಕರು ಕೆಂಗೇರಿ | ಹಾಜರಿದ್ದರು |
| 5 | ಡಾ॥ ರೇಷ್ಮ | ಆರೋಗ್ಯ ಅಧಿಕಾರಿ ಕೆಂಗೇರಿ | ಹಾಜರಿದ್ದರು |
| 6 | ಶ್ರೀ ಶಿವಣ್ಣ ಕೆ.ಬಿ. | ಸಹಾಯಕ ಸಬ್ ಇನ್ಸ್‌ಪೆಕ್ಟರ್, ಕೆಂಗೇರಿ ಪೊಲೀಸ್ ಠಾಣೆ | ಹಾಜರಿದ್ದರು |
| 7 | ಶ್ರೀ ರೇವಣ್ಣ | ಕಂದಾಯ ಪರಿವೀಕ್ಷಕರು, ವಾರ್ಡ್-159 | ಹಾಜರಿದ್ದರು |
| 8 | ಶ್ರೀ ಚಂದ್ರಶೇಖರ್.ಬಿ.ಕೆ | ಕಿರಿಯ ಇಂಜಿನಿಯರ್ ಬೆಸ್ಕಾಂ ಕೆಂಗೇರಿ | ಹಾಜರಿದ್ದರು |
| 9 | ಶ್ರೀಮತಿ ತ್ರಿವೇಣಿ | ವಾರ್ಡ್ ಕಮಿಟಿ ಸದಸ್ಯರು | ಹಾಜರಿದ್ದರು |
| 10 | ಶ್ರೀ ಮಹದೇವಚಾರಿ | ವಾರ್ಡ್ ಕಮಿಟಿ ಸದಸ್ಯರು | ಹಾಜರಿದ್ದರು |
| 11 | ಶ್ರೀಮತಿ ಧನಲಕ್ಷ್ಮೀ | ವಾರ್ಡ್ ಕಮಿಟಿ ಸದಸ್ಯರು | ಹಾಜರಿದ್ದರು |
| 12 | ಶ್ರೀ ಸಂತೋಷ್ | ವಾರ್ಡ್ ಕಮಿಟಿ ಸದಸ್ಯರು | ಹಾಜರಿದ್ದರು |

| | | | |
|---|---|---|---|
| 13 | ಶ್ರೀ ಎಸ್. ಕದರಪ್ಪ | ನಾಗರೀಕರು | ಹಾಜರಿದ್ದರು |
| 14 | ಶ್ರೀ ಎಂ. ಅಶೋಕ್ | ನಾಗರೀಕರು | ಹಾಜರಿದ್ದರು |
| 15 | ಶ್ರೀ ಜಗದೀಸ್ ಹೆಚ್.ಪಿ | ನಾಗರೀಕರು | ಹಾಜರಿದ್ದರು |
| 16 | ಶ್ರೀ ಟಿ. ಪ್ರಭಾಕರ್ | ನಾಗರೀಕರು | ಹಾಜರಿದ್ದರು |

ಮಾನ್ಯ ನೋಡಲ್ ಅಧಿಕಾರಿಯವರ ಸ್ವಾಗತದೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು.

1) **ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ:-** ನೋಡಲ್ ಅಧಿಕಾರಿಯವರು ಕೋವಿಡ್-19ರ ಸಾಂಕ್ರಾಮಿಕ ರೋಗದ ಬಗ್ಗೆ ಹಾಗೂ ಸರ್ಕಾರ ಮತ್ತು ಬಿ.ಬಿ.ಎಂ.ಪಿ. ವತಿಯಿಂದ ನೀಡುತ್ತಿರುವ ಸೌಲಭ್ಯ/ಸೌವಲತ್ತುಗಳು, ಮತ್ತು ಕೋವಿಡ್-19 ಪರೀಕ್ಷೆಯ ಬಗ್ಗೆ ಸವಿಸ್ತಾರವಾಗಿ ಸಭೆಗೆ ವಿವರಿಸಿದರು. ಕೋವಿಡ್-19ರ ಲಸಿಕೆಯನ್ನು ಪಡೆಯಲು ಸಾರ್ವಜನಿಕರು ಆರೋಗ್ಯ ಪರಿವೀಕ್ಷಕರು ಮತ್ತು ಆರೋಗ್ಯಾಧಿಕಾರಿಗಳನ್ನು ಸಂಪರ್ಕಿಸಿ ಸಹಕಾರ ಪಡೆದುಕೊಳ್ಳಲು ಸಭೆಯಲ್ಲಿ ತಿಳಿಸಿದರು. ಕೋವಿಡ್ ಸುರಕ್ಷತಾ ನಿಯಮಾವಳಿಯನ್ನು ತಪ್ಪದೇ ಪಾಲಿಸಲು ಮತ್ತು ಮಾಸ್ಕ್ ಹಾಗೂ ಸ್ಯಾನಿಟೈಸರ್ ಖಡ್ಡಾಯವಾಗಿ ಉಪಯೋಗಿಸಲು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸ್ಥಳೀಯ ನಿವಾಸಿಗಳಿಗೆ ಹಾಗೂ ಬಡಾವಣೆಯ ಪ್ರತಿನಿಧಿಗಳಿಗೆ ತಿಳಿಸಲಾಯಿತು ಮತ್ತು ಕೋವಿಡ್ ಬೂಸ್ಟರ್ ಲಸಿಕೆಯನ್ನು ಪಡೆದುಕೊಳ್ಳಲು ಮತ್ತು ಇದರ ಸದುಪಯೋಗ ಪಡೆಯಲು ಭಾಗವಹಿಸಿದ್ದ ಎಲ್ಲರಿಗೂ ಕೋರಲಾಯಿತು.

2) ವಾರ್ಡ್ ಕಮಿಟಿ ಸದಸ್ಯರಾದ ಶ್ರೀ ಸಂತೋಷ್ ಹಾಗೂ ಶ್ರೀ ಪ್ರಭು ರವರು ವಾರ್ಡ್ ಕಮಿಟಿ ಸಭೆಯಲ್ಲಿ ಮಾತನಾಡಿ ವಾರ್ಡ್ ನಂ.159, ಕೆಂಗೇರಿ ವ್ಯಾಪ್ತಿಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ ವತಿಯಿಂದ ಕುಡಿಯುವ ನೀರಿನ ಹಾಗೂ ಯುಜಿಡಿ ಪೈಪ್‌ಲೈನ್‌ಗಳನ್ನು ಅಳವಡಿಸಲು ಹಳ್ಳಗಳನ್ನು ತೆಗೆದು ಹಾಗೇ ಬಿಟ್ಟಿರುತ್ತಾರೆ. ಯಾವುದೇ ರಸ್ತೆ ಗುಂಡಿಗಳನ್ನು ಮುಚ್ಚಿರುವುದಿಲ್ಲ ಎಂದು ಸಭೆಯಲ್ಲಿ ತಿಳಿಸಿದರು.

ಈ ಬಗ್ಗೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯ ಸಹಾಯಕ ಅಭಿಯಂತರರು ಸಭೆಯಲ್ಲಿ ಮಾತನಾಡಿ ಈಗಾಗಲೇ ಇಲಾಖೆ ವತಿಯಿಂದ ತೆಗೆದಿರುವ ರಸ್ತೆ ಗುಂಡಿಗಳನ್ನು 15 ದಿನಗಳಲ್ಲಿ ಸರಿಪಡಿಸಿ ಜಿ.ಪಿ.ಎಸ್. ಛಾಯಾಚಿತ್ರಗಳನ್ನು ಮುಂದಿನ ಸಭೆಗೆ ಸಲ್ಲಿಸಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

3) ವಾರ್ಡ್ ನಂ.159ರ ವ್ಯಾಪ್ತಿಯಲ್ಲಿ ಬೆಸ್ಕಾಂ ಇಲಾಖೆ ವತಿಯಿಂದ ಭೂಗತ ಕೇಬಲ್‌ಗಳನ್ನು ಅಳವಡಿಸುತ್ತಿದ್ದು, ಅಲ್ಲಲ್ಲಿ ರಸ್ತೆಗಳನ್ನು ಅಗೆದಿದ್ದು, ರಸ್ತೆ ಗುಂಡಿಗಳು ಹಾಗೆಯೇ ಬಿಟ್ಟಿರುತ್ತಾರೆ. ಇದರಿಂದ ವಾಹನ ಸಂಚಾರಕ್ಕೆ ಹಾಗೂ ಪಾದಾಚಾರಿಗಳಿಗೆ ಅನಾನುಕೂಲವಾಗಿರುತ್ತದೆ ಎಂಬ ವಿಷಯವನ್ನು ಎಂದು ಶ್ರೀ ನವೀನ್, ಶ್ರೀ ನಾಗರಾಜು ಹಾಗೂ ಇತರ ಸಾರ್ವಜನಿಕರು ವಾರ್ಡ್ ಕಮಿಟಿ ಸಭೆಯಲ್ಲಿ ತಿಳಿಸಿದರು.

ಈ ಬಗ್ಗೆ ಬೆಸ್ಕಾಂನ ಸಹಾಯಕ ಅಭಿಯಂತರರಾದ ಶ್ರೀ ಚಂದ್ರ ಶೇಖರ್ ರವರು ಮಾತನಾಡಿ ಭೂಗತ ಕೇಬಲ್‌ಗಳನ್ನು ಅಳವಡಿಸಲು ತೆಗೆದಿರುವ ಯಾವುದೇ ಗುಂಡಿಗಳನ್ನು ಮುಚ್ಚದೇ ಹಾಗೆಯೇ ಬಿಟ್ಟಿರುವುದಿಲ್ಲ. ಹಾಗಿಂದಾಗ್ಗೆ ಎಲ್ಲಾ ಗುಂಡಿಗಳನ್ನು ಮುಚ್ಚಲಾಗುತ್ತಿದೆ. ಹಾಗೇನಾದರೂ ಒಂದು ವೇಳೆ ಹಳ್ಳಗಳನ್ನು ತೆಗೆದು ಹಾಗೇ ಬಿಟ್ಟಿದ್ದರೆ ಅಂತಹವುಗಳನ್ನು 10 ದಿನಗಳೊಳಗಾಗಿ ಮುಚ್ಚಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

ಈ ಸಂಬಂಧ ನೋಡಲ್ ಅಧಿಕಾರಿಯವರು ಮಾತನಾಡಿ ಮುಚ್ಚದೇ ಹಾಗೇ ಬಿಟ್ಟಿರುವ ರಸ್ತೆಗುಂಡಿಗಳನ್ನು ಸರಿಪಡಿಸಿ, ಜಿ.ಪಿ.ಎಸ್. ಛಾಯಾಚಿತ್ರಗೊಂದಿಗೆ ವರದಿ ಸಲ್ಲಿಸುವಂತೆ ಸಹಾಯಕ ಅಭಿಯಂತರರು, ಬೆಸ್ಕಾಂ ರವರಿಗೆ ತಿಳಿಸಿದರು.

4) ವಾರ್ಡ್ ನಂ.159ರ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆ ಕಾರ್ಯವು ಸರ್ಮಕವಾಗಿ ನಡೆಯುತ್ತಿಲ್ಲ ಹಾಗೂ ಮನೆ ಮನೆಗೆ ಕಸ ಸಂಗ್ರಹಿಸಲು ಬರುವ ಪೌರ ಕಾರ್ಮಿಕರು ಹಾಗೂ ಕಸ ಸಂಗ್ರಣೆ ಮಾಡಿಕೊಂಡು ಹೋಗುವ ವಾಹನಗಳು ತಮ್ಮ ವಾಹನಗಳಲ್ಲಿ ಗರಿಷ್ಠಮಟ್ಟಕ್ಕಿಂತ ಹೆಚ್ಚಿನ ಕಸವನ್ನು ತುಂಬಿಕೊಂಡು ಹೋಗುತ್ತಾರೆ. ಇದರಿಂದ ವಾಹನ ಚಲಿಸುವಾಗ ರಸ್ತೆಗಳಲ್ಲಿ ಬೀಳುತ್ತದೆ ಹಾಗೂ ಬಾಬುಸಾಹೇಬರ ಪಾಳ್ಯ ಮತ್ತು ಕೆಂಗೇರಿ ವ್ಯಾಪ್ತಿಯಲ್ಲಿ ಕಸವನ್ನು ಸರಿಯಾಗಿ ತೆಗೆಯುತ್ತಿಲ್ಲ ಎಂದು ಶ್ರೀ ನಾಗರಾಜು, ಶ್ರೀಮತಿ ಧನಲಕ್ಷ್ಮೀ, ಶ್ರೀಮತಿ ಲಾವಣ್ಯ ಹಾಗೂ ಇತರ ಸಾರ್ವಜನಿಕರು ವಾರ್ಡ್ ಕಮಿಟಿ ಸಭೆಯಲ್ಲಿ ತಿಳಿಸಿದರು.

ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ ಈ ಬಗ್ಗೆ ಅಗತ್ಯ ಕ್ರಮ ಕೈಗೊಂಡು ಸಮರ್ಪಕವಾಗಿ ಘನತ್ಯಾಜ್ಯ ವಿಲೇವಾರಿ ಮಾಡಲಾಗುವುದು ಎಂದು ಸಭೆಯಲ್ಲಿ ತಿಳಿಸಿದರು.

ಈ ಸಂಬಂಧ ನೋಡಲ್ ಅಧಿಕಾರಿಯವರು ಮಾತನಾಡಿ ಸದರಿ ಸಮಸ್ಯೆಯನ್ನು ತುರ್ತಾಗಿ ಪರಿಹರಿಸಿಲು ಕ್ರಮ ಕೈಗೊಳ್ಳುವಂತೆ ಹಾಗೂ ಘನತ್ಯಾಜ್ಯವನ್ನು ಸಮರ್ಪಕವಾಗಿ ನಿರ್ವಹಿಸಿ, ಛಾಯಾಚಿತ್ರದ ಪ್ರತಿಗಳೊಂದಿಗೆ ವರದಿ ಸಲ್ಲಿಸುವಂತೆ ಕಿರಿಯ ಆರೋಗ್ಯ ಪರಿವೀಕ್ಷಕರು, ಘನತ್ಯಾಜ್ಯ ರವರಿಗೆ ತಿಳಿಸಿದರು.

5) ಶ್ರೀ ಸತ್ಯ ನಾರಾಯಣ, ಮಾಜಿ ಪಾಲಿಕೆ ಸದಸ್ಯರು ಹಾಗೂ ನಾಗರೀಕರು ಸಭೆಯಲ್ಲಿ ಮಾತನಾಡಿ ವಾರ್ಡ್ ನಂ.159, ಕೆಂಗೇರಿ ವ್ಯಾಪ್ತಿಯಲ್ಲಿ ರಸ್ತೆಗಳಲ್ಲಿ ಉಂಟಾಗಿರುವ ರಸ್ತೆ ಗುಂಡಿಗಳನ್ನು ಮುಚ್ಚುವಂತೆ ಹಾಗೂ ಕೊಮ್ಮಘಟ್ಟ ರಸ್ತೆಯ ಹಾಗೂ ಇನ್ನಿತರ ಪಾದಾಚಾರಿ ಮಾರ್ಗವನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲು ಸಾರ್ವಜನಿಕರು ಸಭೆಯಲ್ಲಿ ತಿಳಿಸಿದರು..

ಈ ಸಂಬಂಧ ವಾರ್ಡ್‌ನ ಸಹಾಯಕ ಅಭಿಯಂತರರು ಮಾತನಾಡಿ ಬೆಸ್ಕಾಂ ಹಾಗೂ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಇಲಾಖೆಯವರು ಅಗೆದಿರುವ ರಸ್ತೆಗಳನ್ನು ಹೊರತುಪಡಿಸಿ. ಡಿ.ಎಲ್.ಪಿ ಅವಧಿ

ಇರುವಂತಹ ರಸ್ತೆಗಳು ಗುಂಡಿ ಬಿದ್ದಲ್ಲಿ ಅವುಗಳನ್ನು ಗುತ್ತಿಗೆದಾರರಿಂದಲೇ ಮುಚ್ಚಿಸಲಾಗುತ್ತಿರುತ್ತದೆ ಹಾಗೂ ಡಿ.ಎಲ್.ಪಿ ಮುಗಿದಿರುವ ರಸ್ತೆ ಗುಂಡಿಗಳನ್ನು ಮುಚ್ಚಲು 15 ದಿನಗಳಲ್ಲಿ ರಸ್ತೆಗುಂಡಿಗಳನ್ನು ಮುಚ್ಚುವುದಾಗಿ ಸಭೆಗೆ ತಿಳಿಸಿದರು.

ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ತುರ್ತಾಗಿ ರಸ್ತೆಗುಂಡಿಗಳನ್ನು ಸರಿಪಡಿಸಿ, ಛಾಯಾಚಿತ್ರಗಳನ್ನು ಸಲ್ಲಿಸುವಂತೆ ಸಭೆಯಲ್ಲಿ ಸಹಾಯಕ ಅಭಿಯಂತರರಿಗೆ ತಿಳಿಸಿದರು.

ಮುಂದುವರೆದು, ಮುಂದಿನ ವಾರ್ಡ್ ಸಭೆಯಲ್ಲಿ ತೋಟಗಾರಿಕೆ ಇಲಾಖೆ, ಅರಣ್ಯ ಇಲಾಖೆ ಮತ್ತು ವಿದ್ಯುತ್ ವಿಭಾಗ ರಾರಾನಗರ ವಲಯ ರವರು ಸಭೆಗೆ ಹಾಜರಾಗದೇ ಇರುವುದರಿಂದ ಸದಸ್ಯರು ಹಾಗೂ ನಾಗರೀಕರು ಅಸಮಧಾನವನ್ನು ವ್ಯಕ್ತಪಡಿಸಿರುತ್ತಾರೆ. ಈ ಸಂಬಂಧ ನೋಡಲ್ ಅಧಿಕಾರಿಯವರು ಸಭೆಯಲ್ಲಿ ಮಾತನಾಡಿ ಮುಂದಿನ ಸಭೆಗೆ ಎಲ್ಲಾ ಅಧಿಕಾರಿ ವರ್ಗದವರು ತಪ್ಪದೇ ಹಾಜರಾಗಿ ಸಾರ್ವಜನಿಕರ ಸಮಸ್ಯೆಗಳನ್ನು ಪರಿಹರಿಸುವಂತೆ ಸೂಚಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಎನ್.ನಟರಾಜ)
ಕಾರ್ಯದರ್ಶಿ
ವಾರ್ಡ್-159, ಕೆಂಗೇರಿ

(ಬಸವರಾಜು)
ನೋಡಲ್ ಅಧಿಕಾರಿ
ವಾರ್ಡ್-159, ಕೆಂಗೇರಿ

ರವರಿಗೆ,

1) ಮಾನ್ಯ ಸಹಕಾರ ಸಚಿವರು, ಕರ್ನಾಟಕ ಸರ್ಕಾರ ರವರ ಕಛೇರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2) ಕಾರ್ಯಪಾಲಕ ಅಭಿಯಂತರರು, ಕೆಂಗೇರಿ ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
3) ಸಹಾಯಕ ಕಂದಾಯ ಅಧಿಕಾರಿ ಅಧಿಕಾರಿಗಳು, ಕೆಂಗೇರಿ ವಲಯ ರವರ ಮಾಹಿತಿಗಾಗಿ, ಸದರಿ ಸಭೆಗೆ ಹಾಜರಾಗಲು/ ತಮ್ಮ ಪ್ರತಿನಿಧಿ ಸಿಬ್ಬಂದಿಯವರನ್ನು ನಿಯೋಜಿಸಲು ಕೋರಲಾಗಿದೆ.
4) ಸಹಾಯಕ ಕಾರ್ಯಪಾಲಕ ಅಭಿಯಂತರರು, (ಘ.ತ್ಯಾನಿ) ರವರ ಮಾಹಿತಿಗಾಗಿ, ಸದರಿ ಸಭೆಗೆ ಹಾಜರಾಗಲು/ತಮ್ಮ ಪ್ರತಿನಿಧಿ ಸಿಬ್ಬಂದಿಯವರನ್ನು ನಿಯೋಜಿಸಲು ಕೋರಲಾಗಿದೆ.
5) ಪೊಲೀಸ್ ಇನ್ಸ್‌ಪೆಕ್ಟರ್, ಕೆಂಗೇರಿ ಪೊಲೀಸ್ ಠಾಣೆ (ಕಾನೂನು ಸುವ್ಯವಸ್ಥೆ) ರವರ ಮಾಹಿತಿಗಾಗಿ, ಸದರಿ ಸಭೆಗೆ ಹಾಜರಾಗಲು/ತಮ್ಮ ಪ್ರತಿನಿಧಿ ಸಿಬ್ಬಂದಿಯವರನ್ನು ನಿಯೋಜಿಸಲು ಕೋರಲಾಗಿದೆ.
6) ಪೊಲೀಸ್ ಇನ್ಸ್‌ಪೆಕ್ಟರ್, ಕೆಂಗೇರಿ ಪೊಲೀಸ್ ಠಾಣೆ (ಸಂಚಾರಿ) ರವರ ಮಾಹಿತಿಗಾಗಿ, ಸದರಿ ಸಭೆಗೆ ಹಾಜರಾಗಲು/ತಮ್ಮ ಪ್ರತಿನಿಧಿ ಸಿಬ್ಬಂದಿಯವರನ್ನು ನಿಯೋಜಿಸಲು ಕೋರಲಾಗಿದೆ.
7) ಆರೋಗ್ಯ ಅಧಿಕಾರಿ, ಕೆಂಗೇರಿ, ಕೆಂಗೇರಿ ಉಪನಗರ ಪ್ರಾ.ಆ.ಕೇಂದ್ರ ರವರ ಮಾಹಿತಿಗಾಗಿ, ಸದರಿ ಸಭೆಗೆ ಹಾಜರಾಗಲು ಕೋರಲಾಗಿದೆ.
8) ಸಹಾಯಕ ಇಂಜಿನಿಯರ್, ಬೆಸ್ಕಾಂ ಕೆಂಗೇರಿ ರವರ ಮಾಹಿತಿಗಾಗಿ, ಸದರಿ ಸಭೆಗೆ ಹಾಜರಾಗಲು/ತಮ್ಮ ಪ್ರತಿನಿಧಿ ಸಿಬ್ಬಂದಿಯವರನ್ನು ನಿಯೋಜಿಸಲು ಕೋರಲಾಗಿದೆ.
9) ಸಹಾಯಕ ಇಂಜಿನಿಯರ್ ಬಿ.ಡಬ್ಲ್ಯೂ.ಎಸ್. ಎಸ್.ಬಿ., ರವರ ಮಾಹಿತಿಗಾಗಿ, ಸದರಿ ಸಭೆಗೆ ಹಾಜರಾಗಲು/ತಮ್ಮ ಪ್ರತಿನಿಧಿ ಸಿಬ್ಬಂದಿಯವರನ್ನು ನಿಯೋಜಿಸಲು ಕೋರಲಾಗಿದೆ.
10) ತೋಟಗಾರಿಕಾ ಅಧೀಕ್ಷಕರು, ರಾ.ರಾ.ನಗರ ವಲಯ ರವರ ಮಾಹಿತಿಗಾಗಿ, ಸದರಿ ಸಭೆಗೆ ಹಾಜರಾಗಲು/ತಮ್ಮ ಪ್ರತಿನಿಧಿ ಸಿಬ್ಬಂದಿಯವರನ್ನು ನಿಯೋಜಿಸಲು ಕೋರಲಾಗಿದೆ.
11) ವಾರ್ಡ್ ವ್ಯಾಪ್ತಿಯ ಸಾರ್ವಜನಿಕರು, ಸ್ಥಳೀಯ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಸಭೆಯಲ್ಲಿ ಭಾಗವಹಿಸಲು ಅನುವಾಗುವಂತೆ ಸೂಚನಾ ಫಲಕಕ್ಕೆ ಅಳವಡಿಸಲು